ಜೊತೆಯಲ್ಲಿದ್ದವನಿಗೆ ಏನೋ ಹೇಳಿ ಬೀಳ್ಕೊಟ್ಟು, ಸಾವಕಾಶದಿಂದ ಈತನ ಹತ್ತಿರ ನಡೆದು ಬಂದ.

'ಯಾವೂರು ಸಾರ್ ನಿಮ್ದು?, ಚೆನ್ನಾಗಿದ್ದೀರಾ?' ಎಂದು ಬಹಳ ಹಳೆಯ ಪರಿಚಯವೆಂಬಂತೆ ಮಾತನಾಡಿಸಿದ. ಅಜಯ್‌ಗೋ ಅಚ್ಚರಿ! ಒಮ್ಮೆ ಸುತ್ತಲೂ ನೋಡಿದ. ಬೀಡದಂಗಡಿಯವನು ಅಡಿಕೆ ಕತ್ತರಿಸುತ್ತಲೇ ಒಂಥರಾ ನಗುತ್ತಿದ್ದ. ಆತನ ಗಮನ ಪೂರಾ ತಮ್ಮತ್ತಲೇ ಇದ್ದುದು ಅಜಯ್‌ಗೆ ವಿಚಿತ್ರವೆನಿಸಿತು. ಆದರೂ ತನ್ನ ಪರಿಚಯವನ್ನು ಹೇಳಿಕೊಂಡ.

'ನಮ್ಮೂರಿಗೆ ಯಾವ ಕೆಲಸದ ಮೇಲೆ ಬಂದಿದ್ದು? ಉಳೊದುಕೊಳ್ಳುವುದಕ್ಕೆ ರೂಮು ಗೀಮು ಬೇಕಾಗಿತ್ತಾ ಸಾರ್?' ಎಂದ ಆಗಂತುಕ.

'ಇಲ್ಲ. ನಾನೀವತ್ತೇ ಹಿಂದಿರುಗಬೇಕು' ಎಂದು ಹೇಳಿದರೂ ಅವನ ಮಾತಿನಿಂದ ಅಜಯ್‌ಗೆ ಕುತೂಹಲ ಹುಟ್ಟಿತು. ಏನೋ ಇರಬೇಕು ಈ ಆಸಾಮಿದ್ದು. ನೋಡೋಣ ಎಂದು ಮಾತು ಬೆಳೆಸಿದ.

ಆಗಂತುಕ ಆ ಊರಿನ ವಿದ್ಯಮಾನಗಳ ಬಗ್ಗೆ ಒಂದಿಷ್ಟು ಮಾತನಾಡಿದ ನಂತರ ಒಮ್ಮೆಲೇ 'ಸಾರ್, ತಪ್ಪು ತಿಳ್ಕೋಬೇಡಿ. ನಿಮಗೆ 'ಅದು' ಬೇಕಿತ್ತಾ?' ಎಂದು ಅಂಜುತ್ತಾ ಕೇಳಿದ.

ಅಜಯ್ ಗಲಿಬಿಲಿಯಾದ. 'ಅದು' ಅಂದ್ರೆ ಯಾವುದು? ಅರ್ಥವಾಗಲಿಲ್ಲ? ಎಂದ.

ಆತ ಒಮ್ಮೆ ಸುತ್ತಲೂ ನೋಡಿಕೊಂಡವನು, ತನ್ನೆಡಗೈಯಿಂದ ಎಡ ಮೂಗಿನ ಹೊಳ್ಳೆಯನ್ನು ಎರಡು ಮೂರು ಬಾರಿ ಒತ್ತೊತ್ತಿ ತೋರಿಸಿ ಲಂಪಟ ನಗೆಯೊಂದಿಗೆ 'ಹೆಣ್ಣು ಬೇಕಿತ್ತಾ ಸಾರ್?' ಎಂದು ಗುಟ್ಟಾಗಿ ಕೇಳಿದ.

'ಹೋ... ಹಾಗೋ! ನಿಮ್ಮ ಆ ಮೂಗು ಮುಟ್ಟುವ ಸಂಕೇತದ ಅರ್ಥ ಅದೇನಾ?' ಎನ್ನುತ್ತಲೇ ಮುಜುಗರವಾಗಿ ಛೀ! ಮಾನಗೆಟ್ಟವನು ಸ್ವಲ್ಪನೂ ನಾಚಿಕೆಯಿಲ್ಲದೆ ಕೇಳುತ್ತಿದ್ದಾನಲ್ಲಾ ಎಂದು ಅಜಯ್‌ನ ಅಂತರಾತ್ಮ ಅಸಹ್ಯ ಪಟ್ಟುಕೊಂಡರೂ ಅದನ್ನು ಮೀರಿಸಿದ ಭಾವವೊಂದು ಹಿಂದು ಮುಂದು ಯೋಚಿಸದೇ ಆತನ ಆಹ್ವಾನವನ್ನು ಸ್ವೀಕರಿಸಲು ತುಡಿಯಿತು. ಕೆಲವು ವರ್ಷಗಳಿಂದ ಬಯಸುತ್ತಿದ್ದ ಸಂಗತಿಯೊಂದು ಸುಲಭವಾಗಿ ಅರಸಿ ಬಂದಿರುವಾಗ ಬಿಡಬೇಡ ಎಂದ ಹಾಗಾಯಿತು.

'ಏನ್ಸಾರ್ ಯೋಚಿಸುತ್ತಿದ್ದೀರಿ? ಸಂಕೋಚನಾ ಅಥವಾ ಭಯನಾ? ಥೂ! ಅಂಥದ್ದೆಲ್ಲಾ ಏನಿಲ್ಲ ಬಿಡಿ ಸಾರ್. ನಿಮ್ಮಂಗೆ ತುಂಬಾ ಜನ ಇಲ್ಲಿಗೆ ಬಂದು ಹೋಗ್ತಿರ್ತಾರೆ. ನಿಮ್ಮನ್ನು ನೋಡುವಾಗ ಈ ವಿಷಯದಲ್ಲಿ ಹೊಸಬರಂತೆ ಕಾಣುತ್ತೀರಿ. ಪರ್ವಾಗಿಲ್ಲ ಸಾರ್ ಬನ್ನಿ, ಎಲ್ಲಾ ಸ್ವಲ್ಪ ಹೊತ್ತಲ್ಲಿ ಸರಿ ಹೋಗುತ್ತೆ' ಎಂದು ಆಗಂತುಕ ನಗುತ್ತಾ ಹೇಳಿದಾಗ, ಅಜಯ್‌ಗೆ ಒಳಗೊಳಗೆ ಅರ್ಥವಾಗಂಥ ನಡುಕ ಉಂಟಾಯಿತು.

ಅಜಯ್ ನಂಥವರನ್ನು ಆತ ಅದೆಷ್ಟು ನೋಡಿದ್ದನೋ! ಅವನ ಮೌನವನ್ನು ಸಮ್ಮತಿ ಲಕ್ಷಣಂ ಎಂದು ಗ್ರಹಿಸಿದ ಆಗಂತುಕ ಏಕಾಏಕಿ ಕೈಹಿಡಿದುಕೊಂಡು 'ಹೇ... ನೀವು ಅಷ್ಟೆಲ್ಲಾ ಯೋಚಿಸುವುದಕ್ಕೇನಿಲ್ಲ ಬನ್ನಿ ಸಾರ್, ಕಾರು ಹತ್ತಿ. ಇಲ್ಲೇ ಸ್ವಲ್ಪ ದೂರದಲ್ಲಿದೆ ಆ ಜಾಗ. ಹೋಗೋಣ' ಎಂದಾಗ ಅಜಯ್ ಮರು ಮಾತಿಲ್ಲದೆ ಕಾರು ಹತ್ತಿದ. ಆವಾಗ ಪಾನ್ ಶಾಪಿನವನೂ ಹೊಟೇಲ್ ಮಾಲಕನೂ ಒಂಥರಾ ನಗುತ್ತಿದ್ದರು.

'ಸಾರ್ ಒಂದೊಳ್ಳೆ ಫಿಗರ್ ಇದೆ. ನನ್ನ ಪರಿಚಯದ್ದೇ. ಎಲ್ಲರಿಗೂ ಹೋಗುವವಳಲ್ಲ. ಸಂಸಾರಸ್ಥಳು. ಮರ್ಯಾದೆಗೆ ತುಂಬಾ ಅಂಜುತ್ತಾಳೆ. ಅವ್ಳಿಗೆ ನನ್ನ ಮೇಲೆ ತುಂಬಾ ನಂಬಿಕೆ. ನನಗೆ ಮಾತ್ರ ಒಪ್ಪುತ್ತಾಳೆ. ನೀವು ಹೇಳ್ದಂಗೆ ಕೇಳ್ತಾಳೆ ಸಾರ್'

'ಅಂದ್ರೆ..?'

'ನಿಮ್ಗೆ ಬೇಕಾಂದಂಗೆಲ್ಲಾ ಸಹಕರಿಸ್ತಾಳೆ. ವಾರಕ್ಕೊಂದಾವರ್ತಿ ಆದರೂ ಅವ್ಳಿಗೆ 'ಅದು' ಬೇಕು. ಅದಕ್ಕೆ ಅವ್ಳು ದುಡ್ಡು ಕೇಳೋದಿಲ್ಲ. ಆದರೂ ಕೊಡುವುದು ನಮ್ಮ ಧರ್ಮವಲ್ಲವೇ! ನಾನು ಇದೇ ಕಸುಬಿನಿಂದ ಹೊಟ್ಟೆ ಹೊರೆವವನು ಸಾರ್. ನನಗೆ ನೀವು ಇಪ್ಪತ್ತು ಪರ್ಸೆಂಟ್ ಕೊಟ್ರೆ ಸಾಕು. ಇನ್ನೊಂದು ಮಾತು, ಅವ್ಳು ತುಂಬಾ ಪಾಪದ ಹೆಣ್ಣು ಸಾರ್. ಗಂಡ ಸತ್ತವಳು, ಎಲ್ಲಿಂದಲೋ ಮಗಳೊಂದಿಗೆ ಈ ಊರಿಗೆ ಬಂದು ನನಗೆ ಸಿಕ್ಕಿದಳು. ಅವ್ಳ ಕಷ್ಟ ನೋಡಿ ಈ ಮನೆ ಮಾಡಿಕೊಟ್ಟು ಇಲ್ಲೇ ಸಮೀಪದ ಕಾಫಿ ತೋಟದ ಕೆಲಸಕ್ಕೆ ಸೇರಿಸಿದೆ. ಆದ್ರೆ ತೋಟದ ಮಾಲಿಕ ನೀಚ ಸಾರ್, ಕೆಡಿಸಿಬಿಟ್ಟ ಅವಳನ್ನು! ಅದೇ ದುಃಖದಲ್ಲಿ ಆತ್ಮಹತ್ಯೆ ಮಾಡಿಕೊಳ್ಳೋಕ್ಕೂ ಹೊರಟಿದ್ದಳು! ರಕ್ಷಿಸಿ, ಬುದ್ಧಿವಾದ ಹೇಳಿ ಕರ್ಕೊಂಡು ಬಂದು ನನ್ನೊಟ್ಟಿಗೆ ಇಟ್ಟುಕೊಂಡಿದ್ದೇನೆ ಸಾರ್' ಎಂದ ಆಗಂತುಕ ಮತ್ತೆ ಮಾತು ಮುಂದುವರೆಸುತ್ತಾ, 'ನಾನೂ ಹಿಂದೊಮ್ಮೆ ಒಳ್ಳೆಯ ವೃತ್ತಿಯಲ್ಲೇ ಇದ್ದವನು ಸಾರ್. ಆದರೆ ಹಣೆಬರಹ ಕೆಟ್ಟು ಇಂತಹ ಕಸುಬಿಗೆ ಇಳಿಯಬೇಕಾಯಿತು. ಅವಳೂ ಒಂದು ದಿನ ಹೇಗೋ ಈ ಕಸುಬಿಗೆ ಒಪ್ಪಿದಳು. ದೇವರ ದಯೆಯಿಂದ ನಿಮ್ಮಂತಹವರು ಆಗಾಗ ಬರುತ್ತಿರುವುದರಿಂದ ನಮ್ಮ ಹೊಟ್ಟೆಪಾಡು ಸಾಗುತ್ತಿದೆ ಸಾರ್' ಎಂದು ದೈನ್ಯದಿಂದ ತನ್ನ ಪರಿಸ್ಥಿತಿಯನ್ನು ವಿವರಿಸಿದಾಗ ಅಜಯ್‌ಗೆ ಹೇಗೇಗೋ ಅನಿಸಿತು.

ವೇಶ್ಯಾವಾಟಿಕೆ ಎಂದರೇನು, ಅಂಥ ಹೆಂಗಸರು ಹೇಗಿರುತ್ತಾರೆ, ಆ ಪರಿಸರದವರು ಹೇಗೆ ಬದುಕುತ್ತಾರೆ? ಎಂಬುದನ್ನೆಲ್ಲಾ ಅಜಯ್ ಕೇಳಿದ್ದನೇ ಹೊರತು ಸ್ವತಃ ನೋಡುವ, ನೋಡಿ ಅನುಭವಿಸಿ ಅದರ ತಿರುಳನ್ನು ಅರಿಯುವಂಥ ಅವಕಾಶ ಒದಗಿರಲಿಲ್ಲ. ಆದರೆ ಈವತ್ತು ಬಂದಿದೆ ಎಂದು ಯೋಚಿಸಿದವನು ಆಗಂತುಕನ ಮಾತಿಗೆ ಒಪ್ಪಿದ.

'ಇಲ್ಲೂ ವೇಶ್ಯಾವಾಟಿಕೆಯ ಗಲ್ಲಿಗಳಿವೆಯಾ...?'

'ಈಗಿಲ್ಲ ಸಾರ್. ಹಿಂದೆ, ಅಂದ್ರೆ ಬ್ರಿಟೀಷರಿದ್ದ ಕಾಲದಲ್ಲಿ ಈ ಇಡೀ ಊರೇ ವೇಶ್ಯಾವಾಟಿಕೆಯ ತವರಾಗಿತ್ತಂತೆ. ಆಗ ಇದನ್ನು ಸೂಳೆಗೇರಿ ಎಂದೇ ಕರೆಯುತ್ತಿದ್ದರಂತೆ. ಹಳ್ಳಿಯ ಇಂಥ ಹೆಂಗಸರನ್ನು ಅನುಭವಿಸುವ ಬಯಕೆಯಿಂದ ಬ್ರಿಟೀಷರು ವಾರಗಟ್ಟಲೆ ಕೆಲವು ಶ್ರೀಮಂತರ, ಜಮೀನ್ದಾರರ ಅರಮನೆಗಳಲ್ಲಿ ಠಿಕಾಣಿ ಹೂಡಿ ಸುಖಿಸುತ್ತಾ ಕಾಲ ಕಳೆದು ಹೋಗುತ್ತಿದ್ದರಂತೆ. ಆ ಕಾಲದಲ್ಲಿ ಈ ಕಸುಬಿಗೂ ಒಳ್ಳೆಯ ಸ್ಥಾನಮಾನವಿತ್ತಂತೆ ಸಾರ್! ಆವಾಗ, ಇದೂ ಒಂದು ಕಾನೂನುಬದ್ಧ ವೃತ್ತಿಯಾಗಿತ್ತಂತೆ. ಅಂಥ ಹೆಂಗಸರಿಗೆ ಸಮಾಜ ಮನ್ನಣೆ ನೀಡಬೇಕೆಂಬ ರಾಜಾಜ್ಞೆಯೂ ಇತ್ತಂತೆ. ಅಂದು ಈ ಕೇರಿಯು, ಕತ್ತಲಾಗುತ್ತಲೇ ಬೀದಿಯುದ್ದಕ್ಕೂ ದೊಂದಿ ದೀಪಗಳಿಂದ ಗಂಧರ್ವ ಲೋಕದಂತೆ ಕಂಗೊಳಿಸುತ್ತಿತ್ತಂತೆ. ಹೆಂಡತಿ ತವರಿಗೆ ಹೋದಾಗಲೋ, ಕಾಯಿಲೆ ಬಿದ್ದಾಗಲೋ, ಅವಳು ತೀರಿಕೊಂಡ ನಂತರವೋ, ಹೆರಿಗೆಯ ಕಾಲದಲ್ಲೋ ಅಥವಾ ಒಂದೇ ಹೆಣ್ಣಿನೊಂದಿಗೆ ಇದ್ದು ಬೋರ್ ಹೊಡೆಸಿ ಕೊಂಡವರೆಲ್ಲಾ ಇಲ್ಲಿಗೆ ಬಂದು ಹೋಗುತ್ತಿದ್ದರು ಎಂದು ಅಂದಿನ ಕಥೆಯನ್ನು ನಮ್ಮ ಹೊಟೇಲ್ ಕಾಮತರು ಕಣ್ಣಿಗೆ ಕಟ್ಟುವಂತೆ ಹೇಳುತ್ತಾರೆ ಸಾರ್' ಎಂದು ಆತ ಅಜಯ್‌ಗೆ ಉಮೇದು ಬರಿಸುವ ದಾಟಿಯಲ್ಲಿ ಆಗಿನವರ ರಾಸಲೀಲೆಯನ್ನು ಅಂತೆಕಂತೆಗಳಲ್ಲೇ ವರ್ಣಿಸಿದ.

ಆವರೆಗೂ ಆಗಂತುಕ ಹೇಳಿದ ಕಥೆಯನ್ನೆಲ್ಲಾ ಕುತೂಹಲದಿಂದ ಕೇಳಿಸಿಕೊಂಡ ಅಜಯ್‌ಗೆ ಪುರುಷರಿಗಿರುವ ಇಂತಹ ಸ್ವಾತಂತ್ರ್ಯ ಸ್ತ್ರೀಕುಲಕ್ಕೂ ಇದ್ದಿದ್ದಲ್ಲಿ ಈ ಸಮಾಜದ ಅವಸ್ಥೆ ಏನಾಗುತ್ತಿತ್ತೋ ಎಂದೆನಿಸಿತು. ಉತ್ತರ ಕರ್ನಾಟಕದ ಕೆಲವೊಂದು ಗ್ರಾಮದ ಬಸುರಿ ಹೆಂಗಸರು ಗಂಡಂದಿರ ಕಾಟ ತಡೆಯಲಾರದೆ ಅವರ ಕೈಗೆ ಒಂದಿಷ್ಟು ದುಡ್ಡು ಕೊಟ್ಟು, 'ನಮ್ಮ ಜೀವ ತಿನ್ನಬೇಡಿ, ಹೊರಗೆಲ್ಲಾದರೂ ಹೋಗಿ ಬನ್ನಿ' ಎಂದು ಹೇಳುತ್ತಾರೆಂದು, ವೈದ್ಯ ಸ್ನೇಹಿತರೊಬ್ಬರು ಹೇಳಿದ್ದ ಮಾತೂ ಅಜಯ್‌ನ ಮನದಲ್ಲಿ ಸುಳಿದಾಡಿತು. ಆದ್ದರಿಂದ ತಾನು ಮಾಡಲು ಹೊರಟಿರುವುದೂ ಅಂಥ ತಪ್ಪೇನಲ್ಲ ಎಂದು ತನ್ನನ್ನು ತಾನೇ ಸಮಾಧಾನಿಸಿಕೊಂಡ.

ಆಗಂತುಕ ಮತ್ತೆ ಮಾತು ಮುಂದುವರೆಸಿದ 'ಕ್ರಮೇಣ ಹಿಂದೆ ಇಲ್ಲಿದ್ದ ವೇಶ್ಯೆಯರನ್ನು ಗುಪ್ತ ರೋಗಗಳು ಅಮರಿಕೊಂಡು, ಅನೇಕರು ಸತ್ತು ಹೋದರಂತೆ. ಅದೇ ಕಾಲಕ್ಕೆ ರಾಜರ, ಬ್ರಿಟೀಷರ ಕಾರುಬಾರೂ ಮುಗಿದು ಹೋಯ್ತು. ಅಳಿದುಳಿದವರು ಎಲ್ಲಿಗೋ ವಲಸೆ ಹೋದರಂತೆ. ಈಗ ಈ ಕೇರಿಯಲ್ಲಿ ಅಂಥವರು ಯಾರೂ ಇಲ್ಲ ಸಾರ್. ಈಗಿರೋರು ಆ ನಂತರ ಬೇರೆಲ್ಲಿಂದಲೋ ಬಂದವರು. ಈಗ ಲೈಂಗಿಕ ಕಾಯಿಲೆಗಳ ಭಯವೂ ಇಲ್ಲವಲ್ಲಾ! ಎಲ್ಲಕ್ಕೂ ಔಷಧಿ ಬಂದಿದೆ. ಕಾಂಡೋಮ್ ಬಳಸುವುದೂ ಕಡ್ಡಾಯವಾಗಿದೆಯಲ್ಲವೇ'ಎಂದವನು ಜೋಡಿಯೊಂದರ ಅಪ್ಪುಗೆಯ ಚಿತ್ರವಿದ್ದ 'ಪ್ಯಾಕೇಟ್' ಒಂದನ್ನು ಅಜಯ್ ಎದುರಿಗಿಟ್ಟು ಒಂಥರಾ ನಕ್ಕ.

* * *

ಮುಖ್ಯ ರಸ್ತೆ ಬಿಟ್ಟು ಬಲಕ್ಕೆ ತಿರುಗಿ ಮಣ್ಣಿನ ರಸ್ತೆಯೊಂದರಿಂದ ಸುಮಾರು ದೂರ ಸಾಗಿ ಹಳೇಕಾಲದ ಬಡಾವಣೆಯ ಕಡೆಗೆ ಬಂದರು. ಒಂದು ಕಡೆ ಕಾರು ನಿಲ್ಲಿಸಲು ಸೂಚಿಸಿದ ಆಗಂತುಕ ಅಜಯನನ್ನೂ ಇಳಿಯಲು ಹೇಳಿದಾಗ ಮತ್ತೆ ಅವನನ್ನು ಭೀತಿ ಆವರಿಸಿತು.

